## ಮೂಕಜೀವಿಗಳಿಗೆ ಜೀವಜಲ

ಸೂರ್ಯನ ಪ್ರಖರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅಂದರೆ ಬೇಸಿಗೆ ದಿನಗಳು ಆರಂಭವಾಗ್ತಿದೆ ಎಂದು ಹೇಳಬಹುದು. ಈ ದಿನಗಳಲ್ಲಿ ದೇಹ ತಂಪಾಗಿಡಲು ಜೀವಜಲಕ್ಕೆ ಮೊರೆ ಹೋಗುತ್ತೇವೆ. ನಮ್ಮ ದೇಹ ತಣಿಸಲು. ಬಾಯಾರಿಕೆ ನೀಗಿಸಲು ಹಲವಾರು ದಾರಿಗಳಿವೆ. ಆದರೆ ಮೂಖ ಪಶು ಪಕ್ಷಿಗಳಿಗೇ? ಈ ಛಾಯಾಚಿತ್ರ ಗಮನಿಸಿ. ಹೊಸಪೇಟೆ ನಗರದ ಜೆ.ಪಿ.ಬಡಾವಣೆ 22ನೇ ವಾರ್ಡಿನ ನಿವಾಸಿ ರತ್ನ ಮನೋಹರ ಅವರು ತಮ್ಮ ಮನೆಯ ಮುಂದೆ ಪಶು ಪಕ್ಷಿಗಳಿಗೆಂದು ನೀರಿನ ತೊಟ್ಟಿಯೊಂದು ಇಟ್ಟು ನೀರಿನ ವ್ಯವಸ್ಥೆ ಮಾಡಿದ್ದಾರೆ. ಇವರ ಕೈಂಕರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಸಾಧ್ಯವಾದರೇ, ನಾವು ಈ ಬೇಸಿಗೆ ದಿನಗಳಲ್ಲಿ ಪಶುಪಕ್ಷಿಗಳಿಗೆ ತಮ್ಮ ತಮ್ಮ ಮನೆಯ ಆವರಣದಲ್ಲಿ, ಅಂಗಳದಲ್ಲಿ, ಮಹಡಿಯ ಮೇಲೆ ನೀರಿನ ವ್ಯವಸ್ಥೆ ಮಾಡಬಹುದು ಅಲ್ಲವೇ...!

—ರಘುನಾಥರಾವ್ ತಾಪ್ಸೆ, ದಾವಣಗೆರೆ





## ವೀಳ್ಯದ ಹರಿವಾಣ

ಹಳ್ಳಿಗಳಲ್ಲಿ ಇಂದಿಗೂ ಮನೆಯ ಚಾವಡಿಯಲ್ಲಿ ಒಂದು ವೀಳ್ಯದ ಹರಿವಾಣ ಇರುತ್ತದೆ. ಅದರಲ್ಲಿ ಒಂದು ಗುಳಿಯಲ್ಲಿ ಸುಣ್ಣ, ಮತ್ತೊಂದರಲ್ಲಿ ಅಡಿಕೆ, ಮಗದೊಂದರಲ್ಲಿ ಎಲೆಗಳನ್ನು ಇಟ್ಟಿರುತ್ತಾರೆ. ಜೊತೆಗೆ ಒಂದು ಸಣ್ಣ ಕಬ್ಬಿಣದ ಕತ್ತಿ, ಮತ್ತು ಒಂದು ಸರಳೂ ಇರುತ್ತದೆ. ಹಸಿ ಅಡಿಕೆ ಉಪಯೋಗಿಸುವಾಗ ಅದನ್ನು ಕತ್ತರಿಸಲು ಕತ್ತಿ, ಸುಣ್ಣ ಹಚ್ಚಿಕೊಳ್ಳಲು ಕಡ್ಡಿ ಉಪಯೋಗಕ್ಕೆ ಬರುತ್ತಿತ್ತು. ಈ ಸಾಧನವನ್ನು ಇಂದಿಗೂ ತೋಟದೂರಿನ ಶಾಮಣ್ಣ ಎಂಬುವವರ ಮನೆಯಲ್ಲಿ ಕಾಣಬಹುದು.

—ಶ್ರುತಿ ಎಸ್., ಬೆಂಗಳೂರು

## ಅಪರೂಪದ ಹಣತೆ

ಅವಿಭಕ್ತ ಕುಟುಂಬಗಳು, ದೊಡ್ಡದಾದ ತೊಟ್ಟಿಮನೆಗಳು, ಅನೇಕ ಕೋಣೆಗಳು, ವಿದ್ಯುತ್ ದೀಪಗಳಿಲ್ಲದಿರುವ ಹಿಂದಿನ ಕಾಲದ ಮನೆಗಳಲ್ಲಿನ ಎಲ್ಲಾ ಕೊಠಡಿಗಳಲ್ಲೂ ರಾತ್ರಿ ವೇಳೆ ದೀಪ ಬೆಳಗಿಸಲು ಸಾಧ್ಯವಿರುತ್ತಿರಲಿಲ್ಲ. ಆದ್ದರಿಂದ ಒಂದು ದೊಡ್ಡ ಹಣತೆಯನ್ನು ಹಚ್ಚಿ, ಅತ್ತಿಂದಿತ್ತ ಓಡಾಡುವಾಗ ಅದನ್ನು ಹಿಡಿದುಕೊಂಡು ಹೋಗುತ್ತಿದ್ದರು. ಹಗುರವಾಗಿರುತ್ತಿದ್ದ ಇದರ ಎದುರು ಭಾಗದಲ್ಲಿ ಬತ್ತಿ ಹಾಕಲು ಜಾಗವಿದ್ದರೆ ಮಧ್ಯಭಾಗದಲ್ಲಿ ಎಣ್ಣೆ ಹಾಕಲು ಬಟ್ಟಲಿನ ಆಕಾರದ ಗುಳಿ ಇರುತ್ತದೆ. ಅದರ ತುಂಬಾ ಎಣ್ಣೆ ತುಂಬಿಸಿ, ಚಮಚದಿಂದ ಎದುರಿನ ಬತ್ತಿ ಇರುವ ಭಾಗಕ್ಕೆ ಸ್ವಲ್ಪ ಸ್ವಲ್ಪವೇ ಎಣ್ಣೆಯನ್ನು ಹಾಕುತ್ತಾ ಉಪಯೋಗಿಸುತ್ತಿದ್ದರು.

—ಮನೋಜ್ ಕುಮಾರ್ ಕೆ., ಬೆಂಗಳೂರು






## ನೋಟು ನಾಣ್ಯ ಸಂಗ್ರಹ!

ಕೊರೊನಾ ವೈರಸ್ ವಿಶ್ವದಾದ್ಯಂತ ತಾಂಡವವಾಡುತ್ತಿರುವ ಬೆನ್ನಲ್ಲೇ ದೇಶದಲ್ಲಿ 21 ದಿನಗಳ ಲಾಕ್ ಡೌನ್ ಘೋಷಿಸಲಾಗಿದೆ. ಹೀಗಾಗಿ ಮನೆಯಲ್ಲೇ ಕೂತು ಏಕತಾನತೆ ಕಾಡಿದಾಗ ಹಳೆಯ ಸೂಟ್ ಕೇಸ್ ನೆನಪಿಗೆ ಬಂತು. ಕೂಡಲೇ ಅದನ್ನು ಬಿಚ್ಚಿದೆ. ಅದರೊಳಗೆ ಐದು, ಇಪ್ಪತ್ತು ಹಾಗೂ ಇಪ್ಪತ್ತೈದು ಪೈಸೆಗಳ ಕೆಲವು ನಾಣ್ಯಗಳ ಜೊತೆ ಹಳೆಯ ಆಣೆಯ ನಾಣ್ಯವೂ ಲಭಿಸಿತು. ಜೊತೆಗೆ ದಶಕಗಳ ಹಿಂದೆ ಉದ್ಯೋಗ ನಿಮಿತ್ತ ವಿದೇಶಗಳಿಗೆ ಭೇಟಿಕೊಟ್ಟಿದ್ದಾಗ ಅಲ್ಲಿಂದ ಸಂಗ್ರಹಿಸಿದ್ದ ವಿದೇಶಿ ಕರೆನ್ಸಿಯ ನೋಟುಗಳೂ ಸಿಕ್ಕವು. ಅವುಗಳಲ್ಲಿ ನೈಜೀರಿಯಾದ ನಾಯ್ರಾ, ಇಥಿಯೋಪಿಯಾದ ಬೀರ್, ಸೌದಿ ಅರೇಬಿಯಾದ ರಿಯಾಲ್, ಯುನೈಟೆಡ್ ಅರಬ್ ಎಮಿರೇಟ್ಸ್ ನ ದಿರ್ಹಮ್, ಕೀನ್ಯಾದ ಷಿಲಿಂಗ್, ಅಮೆರಿಕದ ಯು.ಎಸ್.ಡಾಲರ್, ಈಜಿಪ್ಟಿನ ಈಜಿಪ್ಷಿಯನ್ ಪಿಯಾಸ್ಟ್ರೆಸ್ ಇತ್ಯಾದಿ ಕರೆನ್ಸಿಯ ನೋಟುಗಳು ಇದ್ದವು.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ